



**ಚಿತ್ರಗಳ ವಿವರ**

1 ಅಪರೂಪದ ಗುರುತು ಇರುವ ನಾಗರಹಾವು

2 ಕೀಲ್ ಬ್ಯಾಕ್

3 ಕುಕ್ರಿ ವಿಷಕಾರಿಯಲ್ಲದ ಹಾವು

4 ವಿಷಕಾರಿಯಲ್ಲದ ಸ್ಯಾಂಡ್ ಬೋವಾ

5 ರಸಲ್ ವೈಪರ್





ಹೆಚ್ಚಿನವರಿಗೆ ಇಲ್ಲ.

ಹಾವುಗಳ ಕುರಿತು ಮೂಢನಂಬಿಕೆ ಹೆಚ್ಚಾಗಲು ನಮ್ಮ ಸಿನಿಮಾಗಳೂ ಕಾರಣವಾಗಿವೆ ಎನ್ನುವುದು ವಿಚಿತ್ರ. ಹಾವಿನ ಕುರಿತು ಈ ಸಿನಿಮಾಗಳು ವಿಚಿತ್ರ ನಂಬಿಕೆಗಳನ್ನು ಹರಡುತ್ತವೆ. ಹಾವುಗಳನ್ನು ಪೂಜಿಸುವ ಧಾರ್ಮಿಕ ನಂಬಿಕೆ ಒಂದು ರೀತಿಯಲ್ಲಿ ಹಾವಿನ ಸಂತತಿ ಉಳಿಯಲು ಸಹಾಯ ಮಾಡಿದೆ. ಆದರೆ ಹುತ್ತಕ್ಕೆ ಹಾಲೆರೆಯುವ ಮೂಲಕ ಹಾವುಗಳಿಗೆ ತೊಂದರೆಯೇ ಜಾಸ್ತಿ ಎನ್ನುವುದು ನಮ್ಮ ಅರಿವಿಗೆ ಬರುವುದಿಲ್ಲ.

ಹಾವುಗಳ ವಿಷ ಪ್ರೊಟೀನ್‌ಯುಕ್ತವಾಗಿದ್ದು, ಹಾವು ಕಚ್ಚಿದರೆ ಅದರ ವಿಷವೇ ಮದ್ದು ಎಂಬ ಸತ್ಯ ಅದ್ಭುತ. ಹೀಗೆಯೇ ಹಾವುಗಳನ್ನು ಕೊಲ್ಲುತ್ತಾ ಹೋದರೆ ಮುಂದೆ ನಮಗೆ ಅದು ಕಚ್ಚಿದಕ್ಕೆ ಔಷಧಿ ಇಲ್ಲದಂತಾಗುತ್ತದೆ. ಇತ್ತೀಚಿನ ಸಂಶೋಧನೆಯ ಪ್ರಕಾರ, ಹಾವಿನ ವಿಷ ಹಲವು ರೀತಿಯ ಕ್ಯಾನ್ಸರ್‌ಗಳ ಔಷಧಿ ತಯಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಹಾಗೆಂದು ಈ ಔಷಧಿಗಳಿಗಾಗಿ ಹಾವುಗಳನ್ನು ಕೊಲ್ಲುವುದೂ ಆಗಬಾರದು. ಹಲವು ವಿಶ್ವವಿದ್ಯಾನಿಲಯಗಳಲ್ಲಿ ಕ್ಯಾನ್ಸರ್ ಔಷಧಿಗಳಿಗೆ ಹಾವಿನ ವಿಷದ ಬದಲು ಜೈವಿಕ ಪರ್ಯಾಯವನ್ನು ಹುಡುಕುವ ಸಂಶೋಧನೆಗಳೂ ನಡೆಯುತ್ತಿವೆ.

ಹಾವುಗಳು ಶೀತ ರಕ್ತದ ಪ್ರಾಣಿ. ವಾತಾವರಣ ಬಿಸಿಯಾದಂತೆ ಅದರ ಚಲನ–ವಲನ ಏರುತ್ತದೆ. ಚಳಿಗಾಲದಲ್ಲಿ ಅವುಗಳು ಹೆಚ್ಚು ಓಡಾಡುವುದಿಲ್ಲ. ಕಪ್ಪೆ, ಹಲ್ಲಿ ಮತ್ತು ಇಲಿಗಳು ಅವುಗಳ ಮುಖ್ಯ ಆಹಾರ. ಹಾವುಗಳು ಕಟ್ಟಾ ಮಾಂಸಾಹಾರಿಗಳು. ನಾವು ತನಿ ಎರೆಯುವಂತೆ ಅವು ಹಾಲು ಕುಡಿಯುವುದಿಲ್ಲ.

ಹಾವುಗಳ ಜೀವನಶೈಲಿಯನ್ನು ಅಭ್ಯಸಿಸಿದರೆ ಕುತೂಹಲಕರ ವಿವರಗಳು ಸಿಗುತ್ತವೆ. ಕಾಳಿಂಗ ಸರ್ಪದ ಬಗ್ಗೆ ನಮ್ಮಲ್ಲಿ ಚಿತ್ರವಿಚಿತ್ರ ನಂಬಿಕೆಗಳಿವೆ. ಕಾಳಿಂಗ ಸರ್ಪ ಕೇವಲ ಹಾವುಗಳನ್ನು ಮಾತ್ರ ಆಹಾರವಾಗಿ ತಿನ್ನುತ್ತವೆ; ಬೇರೇನನ್ನೂ ತಿನ್ನುವುದಿಲ್ಲ! ಕಾಳಿಂಗ ಸರ್ಪಗಳು ಗೂಡು ಮಾಡಿ ಮೊಟ್ಟೆಗೆ ಕಾವು ಕೊಟ್ಟು ರಕ್ಷಿಸುತ್ತವೆ.

ಬಹುತೇಕ ಹಾವುಗಳು ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಹೆಬ್ಬಾವು ಮೊಟ್ಟೆ ಇಟ್ಟು ಹೆಣ್ಣು ಮಾತ್ರ ಅದರ ರಕ್ಷಣೆ ಮಾಡುತ್ತದೆ. ಮರಿ ಆಗುವ ತನಕ ಸುಮಾರು 20–30 ದಿನಗಳ ಕಾಲ ಹೆಬ್ಬಾವುಗಳು ಆಹಾರವನ್ನು ಸೇವಿಸುವುದಿಲ್ಲ. ಕೆಲವು ಹಾವುಗಳು ಮೊಟ್ಟೆಯನ್ನು ದೇಹದಲ್ಲೇ ಇಟ್ಟುಕೊಂಡು ಮರಿ ಹಾಕುವ ಸಮಯದಲ್ಲಿ ಹೊರಚೆಲ್ಲುತ್ತವೆ.

ಮನುಷ್ಯನ ಅಜ್ಞಾನದಿಂದಾಗಿ ಮತ್ತು ಅತಿ ಆಸೆಯಿಂದಾಗಿ ಹಾವುಗಳ ಸಂತತಿ ಇಂದು ವಿನಾಶದ ಅಂಚಿನಲ್ಲಿದೆ. ಹಾವುಗಳ ಚರ್ಮದಿಂದ ಬೆಲ್ಟ್, ಪರ್ಸ್, ಬ್ಯಾಗ್, ಅಲಂಕಾರಿಕ ವಸ್ತುಗಳ ತಯಾರಿಸುವುದರಿಂದ ಹಾವುಗಳ ಬೇಟೆಯೂ ನಿರಂತರವಾಗಿ ನಡೆದಿದೆ. ಹಾವುಗಳ ಚರ್ಮದಿಂದ ಮಾಡುವ ಇಂತಹ ಉತ್ಪನ್ನಗಳ ಖರೀದಿಸುವುದನ್ನು ನಾವು ಕೈಬಿಡಬೇಕಿದೆ.

ಹೊಲಗದ್ದೆಗಳಲ್ಲಿ ಬೆಳೆಗಳನ್ನು ಹಾಳುಮಾಡುವ ಇಲಿಗಳನ್ನು ನಿಯಂತ್ರಿಸುವಲ್ಲಿ ಹಾವುಗಳ ಪಾತ್ರ ಅತ್ಯಂತ ಪ್ರಮುಖವಾದದ್ದು. ಹಾವುಗಳು ಇಲ್ಲದಿದ್ದರೆ ಬಹುತೇಕ ಬೆಳೆಗಳು ನಮ್ಮ ಕೈಗೆ ಸಿಗುವುದಿಲ್ಲ. ಹಾವುಗಳೆಲ್ಲವೂ ವಿಷಕಾರಿಯಲ್ಲ, ನಮಗೆ ಉಪಕಾರಿ ಎಂದು ಅರಿತು ಹಾವುಗಳನ್ನು ಬದುಕಲು ಬಿಡಿ. ಹೆಡೆ ಎತ್ತಿ ಬದುಕಲು ಬಿಡಿ.